ಶ್ರೀ ಎಂ. ಚಂದ್ರಶೇಖರ್.—ಇದನ್ನು ಗಮನಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಪುರಸಭೆಗಳ ಆದಾಯವನ್ನು ಹೆಚ್ಚಿಸುವುದಕ್ಕೆ ಮೂಲವನ್ನು ಕಂಡು ಹಿಡಿಯಲು ಈ ಸಮಿತಿಯನ್ನು ನೇಮಕಮಾಡಿದ್ದೀರಿ. ಇದನ್ನು ಏನಾದರೂ ನಿರ್ದಿಷ್ಟವಾದಂಥ ಕಾರ್ಯವನ್ನು ಮಾಡುವುದಕ್ಕೆ ತಾವು ನೇಮಿಸಿದ್ದೀರಾ. ಆಕ್ಟ್ಯಯನ್ನೂ ಕೂಡ ಪುನರ್ವಿಮರ್ಶೆ ಮಾಡಂವುದಕ್ಕೆ ಸೂಚನೆ ಏನಾದರೂ ಕೊಟ್ಟಿದ್ದೀರಾ, ಹಾಗೆ ಕೊಟ್ಟಿದ್ದರೆ, ಆ ಸಮಿತಿ ತನ್ನ ವರದಿಯನ್ನು ಯಾವಾಗ ಕೊಡಬೇಕು ಎಂದು ಸೂಚನೆ ಕೊಟ್ಟಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್ .—ಈ ಬಗ್ಗೆ ಸಮಿತಿ ರಚನೆಯಾಗಿದೆ. ಮಿಕ್ಕ ವಿಚಾರಗಳಂ ಏನೂ ಆಗಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಆ ಸಮಿತಿಗೆ ತಾವು ಆದೇಶ ಕೊಟ್ಟಿರತಕ್ಕ ಟರ್ಮ್ಸ್ ಏನು ?

ಶ್ರೀ ಎಂ. ಚಂದ್ರಶೇಖರ್.—ಅದು ಏನು ಎಂದು ಗೊತ್ತಿಲ್ಲ, ಮುಂದೆ ಅದನ್ನು ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಪುರಸಭೆಗಳು ಮತ್ತು ನಗರಸಭೆಗಳು ಮೊದಲು ಏನು ಆಕ್ಟ್ಯಯನ್ನು ಕಲೆಕ್ಷನ್ ಮಾಡುತ್ತಿದ್ದವೋ ಅಷ್ಟು ಹಣವನ್ನು ಸರ್ಕಾರದವರು ರಿಲೀಫಾಗಿ ಕೊಡುತ್ತಿದ್ದಾರೋ ಇಲ್ಲವೋ ?

ಶ್ರೀ ಎಂ. ಚಂದ್ರಶೇಖರ್.—೧೯೭೮—೭೯ರ ಬೇಸ್ ಇಟ್ಟುಕೊಂಡಂ ವರ್ಷೇ ವರ್ಷೇ ಶೇಕಡ ೧೦ ರಷ್ಟು ಪರಿಗಣನೆಗೆ ತೆಗೆದುಕೊಂಡು ಕೊಡುತ್ತಾ ಇದ್ದೇವೆ.

ಹಿಂದಿನ ಮಂಗಳೂರು ನಗರಸಭೆ ಹಾಗೂ ಈಗಿನ ಮಂಗಳೂರಿನ ಮಹಾನಗರ ಪಾಲಿಕೆಗಳ ಲೆಕ್ಕ ಪತ್ರಗಳ ಪರಿಶೋಧನೆ

೯೯ ಶ್ರೀ ವಿ. ಧನಂಜಯ ಕುಮಾರ್ (ಮಂಗಳೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹಿಂದಿನ ಮಂಗಳೂರು ನಗರಪಾಲಿಕೆ ಮತ್ತು ಈಗಿನ ಮಂಗಳೂರು ಮಹಾನಗರಪಾಲಿಕೆಗಳ ಲೆಕ್ಕಪತ್ರಗಳ ಪರಿಶೋಧನೆಯನ್ನು ಪ್ರತಿವರ್ಷ ಮಾಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ವರ್ಷಗಳ ಲೆಕ್ಕಪತ್ರಗಳ ಪರಿಶೋಧನೆ ಬಾಕಿ ಇದೆ ?

ಇ) ಈ ರೀತಿ ಬಾಕಿ ಇಡಲು ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ೧೯೭೮-೭೯ ರಿಂದ

ಇ) ೩-೭-೧೯೮೦ ರಿಂದ ಮಂಗಳೂರು ಮಹಾನಗರಪಾಲಿಕೆಯಾಗಿ ಪರಿಗಣಿಸಲ್ಪಟ್ಟ ನಿಮಿತ್ತ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್ ೧೯೭೬ರ ಪ್ರಕಾರ ಸರ್ಕಾರವು ಲೆಕ್ಕ ಪರಿಶೋಧಕರನ್ನು ನೇಮಿಸಬೇಕಾಗಿದ್ದು ನೇಮಕಾತಿಯಾಗಿಲ್ಲದ ಕಾರಣ ಈ ಕೆಲಸ ಬಾಕಿ ಉಳಿದಿದೆ.

ಶ್ರೀ ವಿ. ಧನಂಜಯ ಕುಮಾರ್.—೧೯೭೮-೭೯ ರಿಂದ ೧೯೮೨-೮೩ರ ವರೆಗೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಬಂದಂಥ ಆದಾಯವೆಷ್ಟು ಮತ್ತು ಆದಂಥ ಖರ್ಚು ಎಷ್ಟು ? ಇದರ ಬಗ್ಗೆ ಸರ್ಕಾರ ಏನಾದರೂ ಗಮನಹರಿಸಿದೆಯೇ ? ಎರಡನೆಯದಾಗಿ, ಲೆಕ್ಕಪರಿಶೋಧಕರನ್ನು ಯಾವಾಗ ನೇಮಕಮಾಡುತ್ತೀರಿ, ಇದರ ಬಗ್ಗೆ ಏನಾದರೂ ಕ್ರಮ ಕೈಗೊಂಡಿದ್ದೀರಾ ?

ಶ್ರೀ ಎಂ. ಚಂದ್ರಶೇಖರ್.—ಆ ವಿವರಗಳು ನನ್ನ ಹತ್ತಿರ ಇಲ್ಲ. ನಿಮ್ಮ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಕ್ರಮ ತೆಗೆದುಕೊಂಡಿದೆ ಎಂದು ಹೇಳುತ್ತೇನೆ. ಈಗ ಚೇಪ್ ಆಡಿಟರನ್ನು ಮತ್ತು ಸಿಬ್ಬಂದಿ ವರ್ಗವನ್ನು ನೇಮಕಮಾಡುವುದಕ್ಕೆ ಹಣಕಾಸಿನ ಇಲಾಖೆಗೆ ಅಭಿಪ್ರಾಯಕ್ಕಾಗಿ ಕಳಿಸಿದೆ. ಅವರ ಅಭಿಪ್ರಾಯವನ್ನು ಸೂಚಿಸಿದ ಮೇಲೆ ಅವರನ್ನು ನೇಮಕಮಾಡುವ ಕೆಲಸ ಪ್ರಾರಂಭ ಮಾಡಬಹಂದು.

ಶ್ರೀ ವಿ. ಧನಂಜಯ ಕುಮಾರ್.–೧೯೭೮–೭೯ ರಿಂದೀಚೆಗೆ ಅಲ್ಲಿ ಲೆಕ್ಕಪತ್ರಗಳು ಭದ್ರವಾಗಿರುತ್ತವೆ ಎಂಬ ಗ್ಯಾರಂಟಿ ಸರ್ಕಾರಕ್ಕೆ ಇದೆಯೇ ?

ಶ್ರೀ ಎಂ. ಚಂದ್ರಶೇಖರ್.—ಇರುತ್ತವೆ ಎನ್ನುತಕ್ಕ ಅಭಿಪ್ರಾಯದ ಮೇಲೆ ಸಂಸ್ಥೆಗಳು ನಡೆದು ಕೊಂಡು ಹೋಗಬೇಕಾಗುತ್ತದೆ.

Disribution of house sites to the poor and Economically weaer section in Urban Areas.

65 Will the Minister for Urban Development be pleased to state.—

(a) The policy of the Government with regard to distribution of house sites to the poor and economically weaker sections in the urban areas ?

(b) The total number of sites distributed so far ?

(c) The target fixed for 1983–84 ?

SRI A. LAKSHMISAGAR (Minister for Law and Parliamentary Affairsand Housing).—

(a) The policy governing distribution of sites to the poor and Economically weaker sections in urban areas is as follows :

Category of persons	Rate charged
a) Persons whose annual income is below Rs 2400/-	25% of the cost of the site
b) Persons whose annual income is between Rs. 2400/- and Rs. 4800/-	50 percent.

75 percent of the beneficiaries to be selected from slum areas. Municipalities with population not exceeding 20,000 will get 75% of the total estimated cost of the Project as subsidy and 12½ per cent of the total estimated cost as loan from the Government. The balance 12½ per cent of the estimated cost of the Project will be the contribution of the Municipalities.

Pattern of Assistance :

Municipalities with population between 20,000 to 1 lakh will get 50% of the estimated cost of the project as subsidy and 25 per cent of the estimated cost of the project as loan from Government and the balance 25 per cent of the estimated cost of the project will be of Municipalities contribution.

(b) 46,613 house sites have been distributed.

(c) 43,356 sites.